ಕರ್ನಾಟಕ ಸರ್ಕಾರ
ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

**Office of the Deputy Director(RI)**
**Rural Industries Section**
**Udupi Zilla Panchayat**
**District Administrative Office's Complex**
**#207, "B" Block, First Floor**
**"RAJATADRI" Manipal, Udupi-576104**
**Phone : 0820-2574915**
Email : ddkvi.udupi@gmail.com

ಉಪ ನಿರ್ದೇಶಕರು(ಗ್ರಾಕೈ)ರವರ ಕಛೇರಿ
ಗ್ರಾಮಾಂತರ ಕೈಗಾರಿಕೆ ವಿಭಾಗ
ಉಡುಪಿ ಜಿಲ್ಲಾ ಪಂಚಾಯತ್
ಜಿಲ್ಲಾ ಆಡಳಿತ ಕಛೇರಿಗಳ ಸಂಕೀರ್ಣ
#207, "ಬಿ" ಬ್ಲಾಕ್, ಮೊದಲನೇ ಮಹಡಿ
"ರಜತಾದ್ರಿ" ಮಣಿಪಾಲ, ಉಡುಪಿ-576104
ದೂರವಾಣಿ: 0820-2574915

---

ಸಂ: ಉಜಿಪಂ/ಉನಿ/ಸುಉಪಕರಣ/ಅರ್ಜಿಆಹ್ವಾನ/ಸಿ1/2024-25 ದಿನಾಂಕ: 09.07.2024

## <u>ಅಧಿಸೂಚನೆ</u>

ಉಡುಪಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿರುವ ಕುಶಲಕಮಿಗಳಿಗೆ ಜಿಲ್ಲಾ ಔದ್ಯಮಿಕ ಕೇಂದ್ರ/ವೃತ್ತಿಪರ ಯೋಜನೆಯಡಿ ವಿವಿಧ ಕಸುಬುಗಳಾದ ಗಾರೆಕೆಲಸ, ಮರಗೆಲಸ, ದೋಬಿ, ಕಮ್ಮಾರಿಕೆ, ಪ್ಲಂಬರ್, ಎಲೆಕ್ಟ್ರಿಷಿಯನ್, ಕ್ಷೌರಿಕ, ಬ್ಯೂಟಿಪಾರ್ಲರ್ ಹಾಗೂ ಟೈಲರಿಂಗ್ ವೃತ್ತಿಯ ಗರಿಷ್ಠ ರೂ.8,000/- ಮೊತ್ತದ ಉಪಕರಣಗಳನ್ನು ಉಚಿತವಾಗಿ ನೀಡಲಾಗುವುದು. ಉಪಕರಣಗಳನ್ನು ಪಡೆಯಲಿಚ್ಛಿಸುವ ಗ್ರಾಮೀಣ ಪ್ರದೇಶದ ಅರ್ಜಿದಾರರು ಆನ್‌ಲೈನ್ ವೆಬ್‌ಸೈಟ್ ನಲ್ಲಿ ನಮೂದಿಸಿದ ಲಿಂಕ್‌ನ ಮುಖಾಂತರ ಅರ್ಜಿಗಳನ್ನು ಭರ್ತಿ ಮಾಡಿ ಗ್ರಾಮ ಪಂಚಾಯತ್ ದೃಢೀಕರಣದೊಂದಿಗೆ ಸಲ್ಲಿಸಲು ಸೂಚಿಸಿದೆ.

ಈ ಸಂಬಂಧ ಹೆಚ್ಚಿನ ವಿವರಗಳಿಗೆ ಉಪ ನಿರ್ದೇಶಕರು, ಗ್ರಾಮಾಂತರ ಕೈಗಾರಿಕೆ, "ಬಿ ಬ್ಲಾಕ್" ರೂಂ. ನಂ.207 ಮೊದಲನೇ ಮಹಡಿ, ರಜತಾದ್ರಿ, ಮಣಿಪಾಲ ಈ ಕಛೇರಿಗೆ ಸಂಪರ್ಕಿಸಲು ತಿಳಿಸಿದೆ.

<u>ಸಲ್ಲಿಸಬೇಕಾಗುವ ದಾಖಲಾತಿಗಳು:</u>

1. ಗ್ರಾಮ ಪಂಚಾಯತ್ ದೃಢೀಕರಣ ಪತ್ರ (ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಸಹಿ ಮತ್ತು ಮೊಹರಿನೊಂದಿಗೆ)
2. ರೇಶನ್‌ಕಾರ್ಡ್ ಪ್ರತಿ.
3. ಜಾತಿ ಆದಾಯ ಪ್ರಮಾಣ ಪತ್ರದ ಪ್ರತಿ (**RD Number** ಹೊಂದಿರುವ ಗಣಕೀಕೃತ ಪ್ರಮಾಣಪತ್ರ ಆಗಿರಬೇಕು)
4. 01 ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ
5. ತರಬೇತಿ ಪಡೆದಿದ್ದಲ್ಲಿ ಪ್ರಮಾಣಪತ್ರದ ಪ್ರತಿ.
6. ವಿಕಲಚೇತನರಾಗಿದ್ದಲ್ಲಿ ಸರ್ಕಾರದಿಂದ ನೀಡಿದ ದೃಢೀಕರಣ ಪತ್ರ

<u>ಷರತ್ತುಗಳು:</u>

1. ಅರ್ಜಿದಾರರಿಗೆ ಅರ್ಜಿ ಸಲ್ಲಿಸುವ ದಿನಾಂಕದಂದು ಕನಿಷ್ಟ 21 ವರ್ಷ ಆಗಿದ್ದು ಗರಿಷ್ಟ 60 ವರ್ಷ ಒಳಗಿರಬೇಕು.
2. ಹಿಂದಿನ 5 ವರ್ಷಗಳಲ್ಲಿ ಈ ಇಲಾಖೆಯಿಂದ ಯಾವುದೇ ಉಪಕರಣ ಪಡೆದಿರಬಾರದು.
3. ಒಂದು ಕುಟುಂಬದಲ್ಲಿ ಒಬ್ಬ ಸದಸ್ಯರು ಮಾತ್ರ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.
4. ಈ ಮೇಲೆ ತಿಳಿಸಿರುವ ದಾಖಲಾತಿಗಳನ್ನು ಸರಿಯಾಗಿ ಅಪ್‌ಲೋಡ್ ಮಾಡದಿದ್ದಲ್ಲಿ ಅರ್ಜಿದಾರರ ಅರ್ಜಿಯನ್ನು ತಿರಸ್ಕರಿಸಲಾಗುವುದು.

<u>ಸೂಚನೆ:</u> ಗ್ರಾಮ ಪಂಚಾಯತ್ ದೃಢೀಕರಣ ಪತ್ರವನ್ನು ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯವರ ಸಹಿ ಮತ್ತು ಮೊಹರಿನೊಂದಿಗೆ ಕಡ್ಡಾಯವಾಗಿ ಅಪ್‌ಲೋಡ್ ಮಾಡತಕ್ಕದ್ದು.

ಕಛೇರಿ ದೂರವಾಣಿ ಸಂಖ್ಯೆ: **0820-2574915**

| | |
|---|---|
| ಅರ್ಜಿ ಸಲ್ಲಿಸಲು ನಿಗದಿ ಪಡಿಸಿದ ಪ್ರಾರಂಭದ ದಿನಾಂಕ | 10.07.2024 |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | 31.08.2024 |
| ವೆಬ್‌ಸೈಟ್ ಲಿಂಕ್ | udupi.nic.in<br>zpudupi.karnataka.gov.in |

ಉಪ ನಿರ್ದೇಶಕರು
ಗ್ರಾಮಾಂತರ ಕೈಗಾರಿಕೆ,
ಜಿಲ್ಲಾ ಪಂಚಾಯತ್, ಉಡುಪಿ

ರಜತಾದ್ರಿ, " ಸಿ" ಬ್ಲಾಕ್,
ಮಣಿಪಾಲ,ಉಡುಪಿ - 576104

ಕರ್ನಾಟಕ ಸರ್ಕಾರ

# ಉಡುಪಿ ಜಿಲ್ಲಾ ಪಂಚಾಯತ್

ದೂರವಾಣಿ: 0820-2574941
Email:zpudupi@gmail.com

ಸಂ: ಉಜಿಪಂ/ಉನಿ/ಸುಉಪಕರಣ/ಅರ್ಜಿ ಆಹ್ವಾನ/ಸ೦/2024-25 ದಿನಾಂಕ:05-07-2024

ರಿಗೆ,

ನಿರ್ದೇಶಕರು (IT) ಮತ್ತು
ಜಿಲ್ಲಾ ಮಾಹಿತಿ ತಂತ್ರಜ್ಞಾನಾಧಿಕಾರಿ,
ಎನ್.ಐ.ಸಿ., ಉಡುಪಿ

ಮಾನ್ಯರೇ,

ವಿಷಯ: ಉಪ ನಿರ್ದೇಶಕರ ಕಚೇರಿ, ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ ಕಚೇರಿಯ ಯೋಜನೆಯ ಸವಲತ್ತುಗಳನ್ನು ಪಡೆಯಲು ಅರ್ಜಿ ಆಹ್ವಾನಿಸಲು ವೆಬ್ ಸೈಟ್ ನಲ್ಲಿ ಪ್ರಕಟಿಸುವಂತೆ ಕೋರಿ.

ಉಲ್ಲೇಖ: ಈ ಕಚೇರಿ ಪತ್ರ ಸಂ: ಉಜಿಪಂ/ಉನಿ/ಉಪಕರಣ/ಅರ್ಜಿಆಹ್ವಾನ/ಸ೦/2024-25 ದಿ:29-06-2024

************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಪ ನಿರ್ದೇಶಕರ ಕಚೇರಿ, ಗ್ರಾಮಾಮತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ ಕಚೇರಿಯ 2024-25 ನೇ ಸಾಲಿನಲ್ಲಿ ಗ್ರಾಮೀಣ ಕುಶಲಕರ್ಮಿಗಳಿಗೆ ಉಚಿತ ವೃತ್ತಿಪರ ಉಪಕರಣಗಳನ್ನು ಪಡೆಯಲು ಆನ್‌ಲೈನ್ ವೆಬ್‌ಸೈಟ್ ಮೂಲಕ ಅರ್ಜಿ ಪಡೆಯುವಂತೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ಆದೇಶ ನೀಡಲಾಗಿದೆ. ಅದರಂತೆ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲು ತಮ್ಮ ಕಚೇರಿಯಿಂದ ಸಾಫ್ಟ್‌ವೇರ್ ಅಭಿವೃದ್ಧಿ ಪಡಿಸಿರುತ್ತೀರಿ. ಅರ್ಜಿಯನ್ನು ಪರಿಶೀಲಿಸಿ ಸರಿಯಾಗಿದೆ ಎಂದು ಉಪ ನಿರ್ದೇಶಕರ ಕಚೇರಿ, ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ ಇವರು ಖಚಿತಪಡಿಸಿರುತ್ತಾರೆ. ಅರ್ಜಿಗಳಿಗೆ ಸಂಬಂಧಿಸಿದಂತೆ ತಾವು ನೀಡಿರುವ ಪರಿಶೀಲನಾ ಪಟ್ಟಿಯನ್ನು ಭರ್ತಿ ಮಾಡಿ ಹಾಗೂ ಸಾರ್ವಜನಿಕರಿಗೆ ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡಲು ದಿನಾಂಕ: 10-07-2024ರಿಂದ 31-08-2024ರವರೆಗೆ ಸಮಯಾವಕಾಶ ನೀಡಲು ಕೋರಲಾಗಿದೆ.

ತಮ್ಮ ವಿಶ್ವಾಸಿ

B. Radhika

ಮಾನ್ಯ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು,
ಜಿಲ್ಲಾ ಪಂಚಾಯತ್, ಉಡುಪಿ

<u>ಪ್ರತಿಯನ್ನು:</u>

ಉಪ ನಿರ್ದೇಶಕರ ಕಚೇರಿ, ಗ್ರಾಮಾಂತರ ಕೈಗಾರಿಕೆ, ಜಿಲ್ಲಾ ಪಂಚಾಯತ್, ಉಡುಪಿ ಇವರಿಗೆ ಮಾಹಿತಿಗಾಗಿ

# ***ಪತ್ರಿಕಾ ಪ್ರಕಟಣೆ***

*ಉಡುಪಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿರುವ ಕುಶಲಕರ್ಮಿಗಳಿಗೆ ಜಿಲ್ಲಾ ಔದ್ಯಮಿಕ ಕೇಂದ್ರ/ವೃತ್ತಿಪರ ಯೋಜನೆಯಡಿ ವಿವಿಧ ಕಸುಬುಗಳಾದ ಗಾರೆಕೆಲಸ, ಮರಗೆಲಸ, ದೋಬಿ, ಕಮ್ಮಾರಿಕೆ, ಪ್ಲಂಬರ್, ಎಲೆಕ್ಟ್ರಿಷಿಯನ್, ಕ್ಷೌರಿಕ, ಬ್ಯೂಟಿಪಾರ್ಲರ್ ಹಾಗೂ ಟೈಲರಿಂಗ್ ವೃತ್ತಿಯ ಗರಿಷ್ಟ ರೂ.8,000/- ಮೊತ್ತದ ಉಪಕರಣಗಳನ್ನು ಉಚಿತವಾಗಿ ನೀಡಲಾಗುವುದು. ಉಪಕರಣಗಳನ್ನು ಪಡೆಯಲಿಚ್ಛಿಸುವ ಗ್ರಾಮೀಣ ಪ್ರದೇಶದ ಅರ್ಜಿದಾರರು ಆನ್‌ಲೈನ್ ವೆಬ್‌ಸೈಟ್* udupi.nic.in & zpudupi.karnataka.gov.in *ನಲ್ಲಿ ನಮೂದಿಸಿದ ಲಿಂಕ್‌ನ ಮುಖಾಂತರ ಅರ್ಜಿಗಳನ್ನು ಭರ್ತಿ ಮಾಡಿ ಗ್ರಾಮ ಪಂಚಾಯತ್ ದೃಢೀಕರಣದೊಂದಿಗೆ ದಿನಾಂಕ: 10-07-2024 ರಿಂದ 31-08-2024ರೊಳಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರು, ಗ್ರಾಮಾಂತರ ಕೈಗಾರಿಕೆ, "ಬಿ ಬ್ಲಾಕ್" ರೂಂ. ನಂ.207 ಮೊದಲನೇ ಮಹಡಿ, ರಜತಾದ್ರಿ, ಮಣಿಪಾಲ ಈ ಕಛೇರಿಗೆ ಸಂಪರ್ಕಿಸಲು ತಿಳಿಸಿದೆ.*

*(ಕಛೇರಿ ದೂರವಾಣಿ ಸಂಖ್ಯೆ: 0820-2574915)*

****************